ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 11 / ಪಿ.ಡಬ್ಲ್ಯೂ.- 07

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 31-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಪ್ರಕಾಶ |
| ತಂದೆಯ ಹೆಸರು - | ಯಲ್ಲಪ್ಪಾ |
| ವಯಸ್ಸು - | 30 ವರ್ಷಗಳು |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಚಾಪಲಗಡ್ಡ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ 10 ಪಂಚನಾಮೆ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.- 10-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 9 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಯಾವುದೇ ಕಾರಣಕ್ಕೆ ನಾನು ಪೊಲೀಸ್ ಠಾಣೆಯ ಹತ್ತಿರ ಸುಮಾರು 2 ವರ್ಷಗಳ ಹಿಂದೆ ಆಗಷ್ಟ 15 ನೇ ತಾರೀಖಿನಂದು ಹೋಗಿದ್ದೆ. ಪಂಚನಾಮೆಯ ಸಲುವಾಗಿ ಸಹಿ ಮಾಡಲು ಪೊಲೀಸ್‌ರು ಹೇಳಿ ಭಾವಚಿತ್ರಗಳನ್ನು ತೆಗೆಸಿದರು. ಅಪಘಾತಕ್ಕೆ ಸಂಬಂದಪಟ್ಟಂತೆ ಪಂಚನಾಮೆಗೆ ಸಾಕ್ಷಿಯನ್ನಾಗಿ ನಿನ್ನ ಸಹಿ ಪಡೆಯುತ್ತೇವೆ ಎಂದು ಪೊಲೀಸ್‌ರು ಹೇಳಿದರು. ಯಾವ ಕಾರಣಕ್ಕೆ ಈ ಪಂಚನಾಮೆಯನ್ನು ಪೊಲೀಸ್‌ರು ಜರುಗಿಸುತ್ತಿದ್ದಾರೆ ಎಂದು ಅವರು ನನಗೆ ಹೇಳಿಲಿಲ್ಲ. ಸದರಿ ಪಂಚನಾಮೆಯಲ್ಲಿರುವ ಮಾಹಿತಿ ನನಗೆ ಗೊತ್ತಿಲ್ಲ. ನಾನು ಆರೋಪಿ ನಂಃ 2 ರವರನ್ನು ನೋಡಿಲ್ಲ. ನನ್ನ ಸಮಕ್ಷಮ ಪೊಲೀಸ್‌ರು ಏನನ್ನು ಜಪ್ತು ಪಡೆಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿನಾಂಕ 18.08.2023 ರಂದು ನನ್ನನ್ನು ಮತ್ತು ಚಾಸಾ 12 ರವರನ್ನು ಪೊಲೀಸ್‌ರು ವಾಹನ ಜಪ್ತು ಪಂಚನಾಮೆಗೆ ಕರೆದಿದ್ದರು ಎಂದರೆ ಸರಿಯಲ್ಲ. ಆದಿನ ಬಿಳಿ ಬಣ್ಣದ ಇನೋವಾ

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **11** / ಪಿ.ಡಬ್ಲ್ಯೂ.- **07**

ಕಾರ್ ಇದ್ದು, ಅದರ ಚಾಲಕನಾದ ಆರೋಪಿ ನಂಃ 2 ರವರು ಸದರಿ ವಾಹನವನ್ನು ಠಾಣೆಯ ಮುಂದೆ ಹಾಜರುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ದಿಃ 15.08.2023 ರಂದು ಬೆಳ್ಳಿಗ್ಗೆ 11.30 ಗಂಟೆಗೆ ಎನ್ ಹೆಚ್ 50 ರಸ್ತೆಯಲ್ಲಿರುವ ಶ್ರೀಶನೇಶ್ವರ ದೇವಸ್ಥಾನದ ಹತ್ತಿರ ಅರ್.ಟಿ.ಓ ಚೆಕ್ ಪೋಸ್ಟ್ ಬಳಿ ಇರುವ ಓವರ್ ಹೆಡ್ ವಾಟರ್ ಟ್ಯಾಕ್ ಹತ್ತಿರ ನಾನು ಈ ಕಾರನ್ನು ವೇಗವಾಗಿ ಚಲಾಯಿಸುತ್ತಿದ್ದಾಗ ಏಕಾಏಕೀ ನಾಯಿ ಅಡ್ಡ ಬಂದಿದಕ್ಕೆ ನಾನು ಕಾರ್ ನ್ನು ನಿಲ್ಲಿಸಿದ್ದರಿಂದ ನನ್ನ ಹಿಂದೆ ವೇಗವಾಗಿ ಬರುತ್ತಿದ್ದ ಯಮಹಾ ಮೊ.ಸೈ ನ ಚಾಲಕ ನನ್ನ ಕಾರ್ ನ ಹಿಂಬಧಿಗೆ ಡಿಕ್ಕಿ ಹೊಡೆದಿರುತ್ತಾರೆ ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ನಾವು ಪರಿಶೀಲಿಸಿ ನೋಡಿದಾಗ ಸದರಿ ಕಾರ ನಂಃ ಕೆಎ 37 ಎನ್ 7789 ಆಗಿರುತ್ತದೆ ಎಂದರೆ ಸರಿ. ಸದರಿ ಕಾರ್ ನ ಹಿಂದಿನ ಬಂಪರ್, ಹಿಂದಿನ ಡಿಕ್ಕಿ ಡೋರ್ ಗ್ಲಾಸ್, ಹಿಂದಿನ ಬಲಬದಿಯ ಲೈಟ್ ನ ಅಸೆಂಬ್ಲಿ, ಹಿಂದಿನ ಬಲಬದಿಯ ಸಸ್ಪೆನ್ಸರ್ ಜಖಂಗೊಡಿಂತ್ತು ಎಂದರೆ ಸಾಕ್ಷಿ ನಾನು ವಾಹನದ ಹಿಂಭದಿಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಬೆಳ್ಳಿಗ್ಗೆ 10.30 ರಿಂದ 11.30 ರವೆರೆಗ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ದಿನ ಆರೋಪಿ ನಂಃ 2 ರವರನ್ನು ನೋಡಿದ್ದರು ಸಹ, ನನ್ನ ಸಮಕ್ಷಮ ನಿಪಿ 10 ರಂತೆ ಪಂಚನಾಮೆ ಜರುಗಿಸಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.